ಶ್ರೀ ವೀರಣ್ಣ (ಹುಣಸೂರು. ಕಣ್ಣು ಆಸ್ಪತ್ರೆಯು ಮತ್ತು ಬಂದೀಖಾನೆಗಳ ರಾಜ್ಯ ಸಚಿವರು).—

ಅ) ದಿನಾಂಕ ೩೧–೧೨–೮೭ರಂದು, ಈ ಮೂರು ಕೇಂದ್ರ ಕಾರಾಗೃಹಗಳಲ್ಲಿದ್ದ ಒಟ್ಟು ಬಂದಿಗಳ ಸಂಖ್ಯೆ ಕೆಳಗಿನಂತಿದೆ :

	ಬಂದಿಗಳು	ಗಂಡಸರು	ಹೆಂಗಸರು	ಒಟ್ಟು
೧.	ಸಜಾ ಆದ ಖೈದಿಗಳು	೭೩೩	೧೮	೭೫೧

ಆ) ಈ ಮೂರು ಕೇಂದ್ರ ಕಾರಾಗೃಹಗಳಲ್ಲಿನ ವಿವರ ಕೆಳಕಂಡಂತಿವೆ.

		ಗಂಡಸರು	ಹೆಂಗಸರು	ಒಟ್ಟು
೧.	ಜೀವಾವಧಿ ಶಿಕ್ಷೆಗೆ ಒಳಗಾದವರು	೪೬೩	೧೦	೪೭೩
೨.	ಅಲ್ಪಾವಧಿ ಶಿಕ್ಷೆಗೆ ಒಳಗಾದವರು	೨೬೮	೮೮	೨೭೬
೩.	ಮರಣ ದಂಡನೆಗೆ ಒಳಗಾದವರು	೦೨		೦೨
	ಒಟ್ಟು	೭೩೩	೧೮	೭೫೧

ಇ) ಈ ಮೂರು ಕೇಂದ್ರ ಕಾರಾಗೃಹಗಳಲ್ಲಿ ದಿನಾಂಕ ೩೧–೧೨–೮೭ರಂದು ಒಟ್ಟು ೧೦೦೨ ವಿಚಾರಣಾಧೀನ ಬಂದಿಗಳಿದ್ದರು.

ಇವರಲ್ಲಿ ೬ ತಿಂಗಳುಗಳಿಂದ ೧ ವರ್ಷ ವಿಚಾರಣಾ ಅವಧಿಯಲ್ಲಿ ಸೆರೆಮನೆ ವಾಸದಲ್ಲಿದ್ದ ಬಂದಿಗಳ ಸಂಖ್ಯೆ ೧೧೬.

ವಿಚಾರಣಾ ಅವಧಿಯಲ್ಲಿ ಸೆರೆಮನೆಯಲ್ಲಿರಿಸಲು ನಿಗದಿತ ಕಾಲಾವಧಿ ಇರುವುದಿಲ್ಲ.

ರಾಜ್ಯದಲ್ಲಿ ಕುಟುಂಬ ನ್ಯಾಯಾಲಯಗಳು

೩೭೩. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್, (ಅಥಣಿ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಕುಟುಂಬ ನ್ಯಾಯಾಲಯವನ್ನು ಎಲ್ಲೆಲ್ಲಿ ಸ್ಥಾಪಿಸಲಾಗಿದೆ ಹಾಗೂ ಎಂದಿನಿಂದ ಕಾರ್ಯಾರಂಭ ಮಾಡಿದೆ?

ಆ) ಈ ನ್ಯಾಯಾಲಯದಲ್ಲಿ ೧೯೮೭ರ ಡಿಸೆಂಬರ್ ಅಂತ್ಯದವರೆಗೆ ಎಷ್ಟು ಪ್ರಕರಣಗಳು ದಾಖಲಾಗಿವೆ?

ಇ) ಇವುಗಳಲ್ಲಿ ಎಷ್ಟು ಇತ್ಯರ್ಥವಾಗಿವೆ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಬೆಂಗಳೂರು, ದಿನಾಂಕ ೨೫-೫-೧೯೮೭ ರಿಂದ ಕಾರ್ಯಾರಂಭ ಮಾಡಿದೆ.

ಆ) ೨೬೭೫ ಪ್ರಕರಣಗಳು

ಇ) ೫೪೩ ಪ್ರಕರಣಗಳು